<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,</u>
<u>ಹೊಸದುರ್ಗ</u>

ಓ.ಎಸ್.**1/2018**
ಡಿ.ಡಬ್ಲೂ. **6**

ದಿನಾಂಕ.**14/09/2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀ ಸವಾಲು: ಶ್ರೀ..ಎಸ್.ಜಿ , ವಕೀಲರಿಂದ **1, 6** ರಿಂದ **9** ನೇ ಪ್ರತಿವಾದಿಗಳ ಪರವಾಗಿ:</u>

3. ನಾನು 9 ನೇ ತರಗತಿವರೆಗೆ ಓದಿರುತ್ತೇನೆ. ನಾನು ಕಳೆದ 15 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ . ಇದಕ್ಕಿಂತ ಪೂರ್ವದಲ್ಲಿ ನಾನು ನನ್ನ ತಂದೆ ಕಲ್ಲೋಡಿನಲ್ಲಿ ವಾಸವಾಗಿದ್ದೆವು. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿರುತ್ತದೆ . ತಕರಾರು ಸ್ವತ್ತುಗಳಲ್ಲಿ ನನಗೆ ಭಾಗ ಕೊಡಬೇಕಾಗಿರುತ್ತದೆ. ಸಮಪಾಲು ಬರಬೇಕೆಂದು ಹಾಕಿರುತ್ತೇನೆ. ಮೂರು ಭಾಗ ಆಗಬೇಕೆಂದು ಕೇಳಿರುತ್ತೇನೆ. ಸಿದ್ದಪ್ಪ, ಮಲ್ಲಪ್ಪ ಮತ್ತು ಪರಪ್ಪ ರವರಿಗೆ ತಲಾ ಒಂದೊಂದು ಭಾಗ ಆಗಬೇಕಿರುತ್ತದೆ. ಸಿದ್ದಪ್ಪ ನಮ್ಮ ತಾತ ಆಗಿರುತ್ತಾರೆ.

4. ಸರ್ವೇ ನಂ. 38/2 20 ಗುಂಟೆ ಈಗ ಯಾರ ಹೆಸರಿನಲ್ಲಿದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಕರಾರಿನ 2 ನೇ ಸ್ವತ್ತು ಸರ್ವೆನಂ. 38/1 ಎ ಈಗ ರುದ್ರಪ್ಪನ ವರ ಹೆಸರನಲ್ಲಿರುತ್ತದೆ. ಸರ್ವೇ ನಂ. 38/1 ಎ ರಲ್ಲಿ 11 ಎಕರೆ 18 ಗುಂಟೆಯ ದಾಖಲಾತಿಗಳು ರುದ್ರಪ್ಪನ ಹೆಸರಿನಲ್ಲಿ ಇರುವಬಗ್ಗೆ ದಾಖಲಾತಿಗಳನ್ನು ನೋಡಿರುವುದಿಲ್ಲ. ಈ ಬಗ್ಗೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

5. ಇಕರಾರಿನ 3 ನೇ ಷಡ್ಯೂಲ್ ಸ್ವತ್ತು ಸರ್ವೇ ನಂ. 7/8 ಗಂಗಾಧರ್ ರವರ ಹೆಸರಿನಲ್ಲಿರುತ್ತದೆ. ಸದರಿ ಗಂಗಾಧರ್ ನಮ್ಮ ಇನ್ನೊಬ್ಬ ತಾತ ಪರಪ್ಪನವರ ಮಗ ಆಗಿರುತ್ತಾರೆ.

ಸದರಿ ಸ್ವತ್ತು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿಸಿರುತ್ತಾರೆ. ಸದರಿ ಸ್ವತ್ತನ್ನು ಯಾವಾಗ ಖರೀದಿಸಿರುತ್ತಾರೆಂದು ಹೇಳಲು ಆಗುವುದಿಲ್ಲ. ಯಾರಿಂದ ಸ್ವತ್ತನ್ನು ಖರೀದಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. 3 ನೇ ತಕರಾರಿನ ಸ್ವತ್ತು ಈಗ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿರುವುದಿಲ್ಲ.

6. 4 ನೇ ತಕರಾರಿನ ಸ್ವತ್ತು ಸರ್ವೆ ನಂ. 16/1 ರಲ್ಲಿ 4 ಎಕರೆ 4 ಗುಂಟೆ ಇರುತ್ತದೆ. ಈ ಸ್ವತ್ತು ಈಗ ರುದ್ರಪ್ಪನ ಹೆಸರಿನಲ್ಲಿರುತ್ತದೆ. ಈ ಬಗ್ಗೆ ನ್ಯಾಯಾಲಯಕ್ಕೆ ನಾನು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಮೀನಾಕ್ಷಿ ವಾಟರ್ ವರ್ಕ್ಸ್ ಗೆ ಜಾಗ ಕೊಟ್ಟಿದ್ದರಿಂದ 4 ನೇ ತಕರಾರಿನ ಸ್ವತ್ತನ್ನು ಸರ್ಕಾರದವರು ಕೊಟ್ಟಿರುತ್ತಾರೆ. ಮೀನಾಕ್ಷಿ ವಾಟರ್ ವರ್ಕ್ಸ್ ಗೆ ಯಾವಾಗ ಜಾಗ ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. 4 ನೇ ತಕರಾರು ಸ್ವತ್ತನ್ನು ಸರ್ಕಾರದವರು ಯಾವ ಇಸವಿಯಲ್ಲಿ ಕೊಟ್ಟಿರುತ್ತಾರೆಂದು ಗೊತ್ತಿಲ್ಲ.

7. 1930 ನೇ ಇಸವಿಯಲ್ಲಿಯೆ ನಮ್ಮ ಮುತ್ತಾತ ರುದ್ರಯ್ಯ, ತಾತ ಸಿದ್ದಪ್ಪ, ಪರಣ್ಣ ಮತ್ತು ಮಲ್ಲಣ್ಣ ಇವರೆಲ್ಲರೂ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಈ ರೀತಿ ವಿಭಾಗ ಆದಾಗ ನಿಮ್ಮ ಅಜ್ಜ ಸಿದ್ದಪ್ಪನಿಗೆ ಹೊಸದುರ್ಗದಲ್ಲಿರುವ ಮನೆಯನ್ನು ನೀಡಿದ್ದರು ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ನಮ್ದು ಅಜ್ಜ ದುಡಿದು ಸ್ವಯಾರ್ಜಿತವಾಗಿ ಖರೀದಿಸಿರುತ್ತಾರೆಂದು ನುಡಿಯುತ್ತಾರೆ. ಯಾವ ವರ್ಷ ಮನೆಯನ್ನು ಖರೀದಿಸಿರುತ್ತಾರೆಂದು ಹೇಳಲು ಆಗುವುದಿಲ್ಲ. ಮನೆಯನ್ನು ಯಾರಿಂದ ಎಷ್ಟಕ್ಕೆ ಖರೀದಿಸಿರುತ್ತಾರೆಂದು ನನಗೆ ಗೊತ್ತಿಲ್ಲ .

8. ನನ್ನ ಅಜ್ಜ ಮತ್ತು ನನ್ನ ತಂದೆ ಸದರಿ ಮನೆಯನ್ನು ಪ್ರತಿವಾದಿ 3(ಎ) ಮರುಳುಸಿದ್ದಮ್ಮನವರಿಗೆ ದಿನಾಂಕ 26/10/1988 ರಂದು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನೊಂದಾಯಿತ ಕ್ರಯ ಪತ್ರದ ಮುಖಾಂತರ ಮನೆಯನ್ನು ಮಾರಾಟ ಮಾಡಿದ್ದು ಆ ಕ್ರಯ ಪತ್ರಕ್ಕೆ ನಮ್ಮ ತಂದೆಯೂ ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ . 1930 ರಲ್ಲಿ ವಿಭಾಗ ಆದಂತೆ ಅವರವರಿಗೆ ಪಾಲಿಗೆ ಬಂದ ಸ್ವತ್ತನ್ನು ಅನುಭವಿಸಿಕೊಂಡು ಪ್ರತೇಕವಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ.

9. ನಾವು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೇವೆಂದು ತೋರಿಸಲು ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1930 ರಲ್ಲಿ ವಿಭಾಗದಲ್ಲಿ ನಿಮ್ಮ ತಾತನಿಗೆ ಬಂದಂತಹ ಮನೆಯನ್ನು ನಿಮ್ಮ ತಂದೆ ಮತ್ತು ತಾತ 1988 ರಲ್ಲಿ ಮಾರಾಟ ಮಾಡಿದ ನಂತರ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ವಾಸವಾಗಿದ್ದರು ಎಂದು ಸೂಚಿಸಲಾಗಿ ಸಾಕ್ಷಿ ಮನೆಯನ್ನು ಮಾರಾಟ ಮಾಡಿರಲಿಲ್ಲ ಕಾರಣಾಂತರದಿಂದ ಸದರಿ ತಾಲ್ಲೂಕಿನಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ.

10. ನಾನು ನೋಟಿಸ್ ನೀಡಿ ಭಾಗ ಬೇಕೆಂದು ನಾನು ಯಾವಾಗಲೂ ಕೇಳಿರುವುದಿಲ್ಲ. ತಕರಾರು ಷೆಡ್ಯೂಲ್ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿ ಆಗದೆ ಇದ್ದರೂ ಅದರಲ್ಲಿ ಭಾಗ ಬರಬೇಕೆಂದು ಸುಳ್ಳು ತಕರಾರು ಹಾಕಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ವಾದಿಯೊಂದಿಗೆ ಶರೀಕ್ ಆಗಿ 1 ನೇಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲಲಿ ಮತ್ತು ತಕರಾರು ಸ್ವತ್ತುಗಳಲ್ಲಿ ನನಗೆ ಯಾವುದೆ ಹ ಕ್ಕು ಅಧಿಕಾರ ಇಲ್ಲ ಮತ್ತು ಭಾಗ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.